ಆ) ವಿಷಯ: ಪ್ರಸ್ತುತ ಅಧಿವೇಶನವನ್ನು ಎರಡು ದಿವಸ ಮುಂದುವರೆಸುವ ಬಗ್ಗೆ.

ಅಧ್ಯಕ್ಷರು:– ದಿನಾಂಕ 04.02.2013 ರಂದು ನಡೆದ ಕಾರ್ಯಕಲಾಪಗಳ ಸಲಹಾ ಸಮಿತಿಯಲ್ಲಿ ಪ್ರಸ್ತುತ ಅಧಿವೇಶನವನ್ನು ಎರಡು ದಿವಸ ಮುಂದುವರೆಸಿ ದಿನಾಂಕ 15.02.2013 ರವರೆಗೆ ನಡೆಸಲಾಗುವುದು, ಹಾಗೂ ದಿನಾಂಕ 08.02.2013 ರಂದು ಮಂಡನೆಯಾಗಲಿರುವ ಆಯವ್ಯಯದ ಚರ್ಚೆಗೆ ಮಾನ್ಯ ಮುಖ್ಯಮಂತ್ರಿಯವರು ದಿನಾಂಕ 14.02.2013 ರಂದು ಉತ್ತರವನ್ನು ನೀಡುತ್ತಾರೆಂದು ಈ ಮೂಲಕ ಮಾನ್ಯ ಎಲ್ಲಾ ಶಾಸಕರಿಗೆ ತಿಳಿಯಪಡಿಸಲಾಗಿದೆ.

ಶ್ರೀ ಸಿದ್ದರಾಮಯ್ಯ:– ಮಾನ್ಯ ಅಧ್ಯಕ್ಷರೆ, ನಾನು ಕಾವೇರಿ ನೀರಿನ ವಿಚಾರವಾಗಿ....

ಶ್ರೀ ಹೆಚ್.ಡಿ. ರೇವಣ್ಣ:– ಮಾನ್ಯ ಅಧ್ಯಕ್ಷರೆ, ನಾವು ರೈಟಿಂಗ್‌ನಲ್ಲಿ ಸುಮಾರು ಜನ ಶಾಸಕರುಗಳು ಸಹಿ ಮಾಡಿ ಪತ್ರ ಕೊಟ್ಟಿರುತ್ತೇವೆ.

ಶ್ರೀ ಸಿದ್ದರಾಮಯ್ಯ:– ನಾನು ಕೂಡ ಅದನ್ನೇ ಕೊಟ್ಟಿರುತ್ತೇನೆ.

ಅಧ್ಯಕ್ಷರು:– ಮಾನ್ಯ ವಿರೋಧ ಪಕ್ಷದ ನಾಯಕರು ಎದ್ದು ನಿಂತಾಗ, ನೀವು ಕೂಡಬೇಕು.

ಶ್ರೀ ಹೆಚ್.ಡಿ. ರೇವಣ್ಣ:– ನಾನು ರೈಟಿಂಗ್‌ನಲ್ಲಿ ಕೊಟ್ಟಿರುತ್ತೇನೆ.

ಶ್ರೀ ಸಿದ್ದರಾಮಯ್ಯ:– ಮಾನ್ಯ ರೇವಣ್ಣನವರೆ, ನಿಯಮಾವಳಿ ಪ್ರಕಾರ ವಿರೋಧ ಪಕ್ಷದ ನಾಯಕರು ಮಾತನಾಡಿದ ಮೇಲೆಯೇ ತಾವು ಮಾತನಾಡಬೇಕು.

(ಗೊಂದಲ)

ಶ್ರೀ ಹೆಚ್.ಡಿ. ರೇವಣ್ಣ:– ನನಗೆ ಗೊತ್ತು ಸಾರ್. ನಿಯಮಾವಳಿ ಪ್ರಕಾರ ತಮಗೆ ಮಾತನಾಡಲು ಅವಕಾಶವಿದೆ ಮಾತನಾಡಿ ಬೇಡ ಎನ್ನುವುದಿಲ್ಲ. ಆದರೆ ನಾನು ಪ್ರಸ್ತಾಪ ಮಾಡಿದ್ದೇನೆ.

(ಗೊಂದಲ)

ಶ್ರೀ ಸಿದ್ದರಾಮಯ್ಯ:– ಮಾನ್ಯ ಅಧ್ಯಕ್ಷರೆ, ಮಾನ್ಯ ರೇವಣ್ಣನವರಿಗೆ ಆನಂತರ ಅವಕಾಶ ಕೊಡಿ.

(ಗೊಂದಲ)

ಅಧ್ಯಕ್ಷರು:– ಮಾನ್ಯ ರೇವಣ್ಣನವರೆ ತಮಗೆ ಮಾತನಾಡಲು ಆನಂತರ ಅವಕಾಶ ಕೊಡುತ್ತೇನೆ. ಮಾನ್ಯ ವಿರೋಧ ಪಕ್ಷದ ನಾಯಕರು ಮಾತನಾಡಲು ಎದ್ದು ನಿಂತ ಮೇಲೆ ಮಾತನಾಡಬೇಡಿ ಎಂದು ಅವರಿಗೆ ಹೇಳುವುದಕ್ಕಾಗುತ್ತದೆಯೇ? ನೀವು ಸಹಕಾರ ಕೊಡಿ.

(ಗೊಂದಲ)

ಶ್ರೀ ಹೆಚ್.ಡಿ. ರೇವಣ್ಣ:– ನಾನು ಬೆಳಗ್ಗೆ 10.00 ಗಂಟೆಗೆ ತಮ್ಮ ಕಛೇರಿಗೆ ಬಂದು ಪ್ರಸ್ತಾಪ ಮಾಡಿದ್ದೇನೆ. ಅದಕ್ಕೋಸ್ಕರ ಮಾತನಾಡಲು ಅವಕಾಶ ಕೊಡಿ ಎಂದು ಕೇಳುತ್ತಿದ್ದೇನೆ.

(ಗೊಂದಲ)

ಅಧ್ಯಕ್ಷರು:– ಆಯಿತು, ತಮಗೆ ಮಾತನಾಡಲು ಅವಕಾಶ ಕೊಡುತ್ತೇನೆ. ಈಗ ಕುಳಿತುಕೊಳ್ಳಿ.

(ಗೊಂದಲ)

ಶ್ರೀ ಸಿದ್ದರಾಮಯ್ಯ:– ಮಾನ್ಯ ರೇವಣ್ಣನವರೆ ತಮಗೂ ಮಾತನಾಡಲು ಅವಕಾಶ ಕೊಡುತ್ತಾರೆ. ನಾನೇ ಕೊಡುವುದಕ್ಕೆ ಹೇಳುತ್ತೇನೆ.

(ಗೊಂದಲ)

ಶ್ರೀ ಹೆಚ್.ಡಿ. ರೇವಣ್ಣ:– ನಾನು writing ನಲ್ಲಿ ಕೊಟ್ಟಿದ್ದೇನೆ.

(ಗೊಂದಲ)

ಅಧ್ಯಕ್ಷರು:– ಮಾತನಾಡಲು ಅವಕಾಶ ಕೊಡುತ್ತೇನೆ. ಈಗ ಕುಳಿತುಕೊಳ್ಳಿ.